# ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟ್

ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-01

## ಯಶಸ್ವಿನಿ ಯೋಜನೆಯ ಷರತ್ತುಗಳು ಮತ್ತು ನಿಬಂಧನೆಗಳು
**(ಸದಸ್ಯರ ಉಪಯೋಗಕ್ಕಾಗಿ)**

**ಪ್ರಧಾನ ಅರ್ಜಿದಾರನ ಹೆಸರು :** ________________

**ಯುನಿಕ್ ಐಡಿ ಸಂಖ್ಯೆ :** ______________________ **ಸಹಕಾರ ಸಂಘದ ಮುದ್ರೆ**

**ಯಶಸ್ವಿನಿ ಯೋಜನೆ:**

1. **"ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆಯು"** ಗ್ರಾಮೀಣ ಸಹಕಾರಿಗಳಿಗಾಗಿಯೇ ಕರ್ನಾಟಕ ಸರ್ಕಾರವು, ಸಹಕಾರ ಇಲಾಖೆಯ ಮೂಲಕ ಆಯೋಜಿಸಿರುವ ವಿಶಿಷ್ಟ ಆರೋಗ್ಯ ರಕ್ಷಣಾ ಯೋಜನೆ.
2. ಯಶಸ್ವಿನಿ ವಿಮಾ ಯೋಜನೆ ಅಲ್ಲ. ಇದು ಒಂದು ಸ್ವಯಂನಿಧಿ ಶಸ್ತ್ರ ಚಿಕಿತ್ಸಾ ಯೋಜನೆ. ಯಶಸ್ವಿನಿ ಕೇವಲ ಶಸ್ತ್ರಚಿಕಿತ್ಸೆಗಳಿಗೆ ಅನ್ವಯವಾಗುವ ಯೋಜನೆ. ಶಸ್ತ್ರಚಿಕಿತ್ಸೆ ಅವಶ್ಯವಿಲ್ಲದ ವೈದ್ಯಕೀಯ ಚಿಕಿತ್ಸೆಯು ಈ ಯೋಜನೆಯಲ್ಲಿ ಒಳಗೊಂಡಿರುವುದಿಲ್ಲ.

**ಸದಸ್ಯರ ಅರ್ಹತೆಗಳು:**

3. ಮುಖ್ಯ ಅರ್ಜಿದಾರನು ನೋಂದಣಿ ವರ್ಷದ ಜೂನ್ 1ನೇ ದಿನಾಂಕಕ್ಕೆ ಕನಿಷ್ಠ ಆರುತಿಂಗಳ ಮೊದಲು ಯಾವುದೇ ಅರ್ಹ ಸಹಕಾರ ಸಂಘದ ಸದಸ್ಯನಾಗಿರಬೇಕು.
4. ಮುಖ್ಯ ಅರ್ಜಿದಾರನು ತನ್ನ ಅವಿಭಾಜ್ಯ ಕುಟುಂಬದ ಎಲ್ಲ ಅರ್ಹ ಸದಸ್ಯರನ್ನು ಫಲಾನುಭವಿಗಳಾಗಿ ನೋಂದಣಿ ಮಾಡಲು ಅರ್ಹರು.
5. ಯೋಜನೆಯಲ್ಲಿ ನವಜಾತ ಶಿಶುವಿನಿಂದ 75 ವರ್ಷದವರೆಗಿನ ಪ್ರತಿಯೊಬ್ಬರು ಸದಸ್ಯರಾಗಲು ಅರ್ಹರು, ಆದರೆ 75 ವರ್ಷಕ್ಕಿಂತ ಮೇಲ್ಪಟ್ಟು ವಯಸ್ಸಾದವರು ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗುವುದಿಲ್ಲ.
6. ಯೋಜನೆಯಡಿ ಅರ್ಹ ಮುಖ್ಯ ಅರ್ಜಿದಾರ ಹಾಗೂ ಅವನ ಕುಟುಂಬ ಸದಸ್ಯರು ಟ್ರಸ್ಟ್ ನಿಗದಿಪಡಿಸಿದ ವಾರ್ಷಿಕ ವಂತಿಗೆಯನ್ನು ಪ್ರತಿ ವರ್ಷ ನೋಂದಾವಣಿ ಅವಧಿಯಲ್ಲಿ ಪಾವತಿಸಬೇಕು. ನೋಂದಾವಣೆಯು ಪ್ರತಿ ವರ್ಷ ನಿಗದಿತ ಅವಧಿಗೆ ಸೀಮಿತವಾಗಿರುತ್ತದೆ.
7. ಒಂದೇ ಕುಟುಂಬದ 5 ಅಥವಾ 5ಕ್ಕಿಂತ ಹೆಚ್ಚು ಸದಸ್ಯರನ್ನು ನೋಂದಾಯಿಸಿದರೆ, ವಂತಿಗೆಯಲ್ಲಿ ಶೇ.15ರಷ್ಟು ರಿಯಾಯಿತಿ ಲಭ್ಯವಿರುತ್ತದೆ.
8. ಯೋಜನೆಯ ಸೌಲಭ್ಯಗಳು ನಿಗದಿತ ಪ್ರಮಾಣದಲ್ಲಿ ವಂತಿಗೆ ನೀಡಿದ ಆ ಒಂದು ವರ್ಷಕ್ಕೆ ಅಗತ್ಯವಾಗಬಹುದಾದಂತಹ ಯಾವುದೇ ಶಸ್ತ್ರಚಿಕಿತ್ಸೆಯನ್ನು ಕೆಲವು ಷರತ್ತುಗಳಿಗೆ ಒಳಪಟ್ಟು ನಿಗದಿತ ಮಿತಿಯೊಳಗೆ ನಗದುರಹಿತವಾಗಿ ಪಡೆಯಲು ಅರ್ಹರು.
9. ಯೋಜನೆಯ ಅವಧಿಯು ಒಂದು ವರ್ಷವಾಗಿದ್ದು, ಪ್ರತಿ ವರ್ಷ ಜೂನ್ 1ರಿಂದ ಪ್ರಾರಂಭವಾಗಿ ಮೇ31ರಂದು ಮುಕ್ತಾಯವಾಗುತ್ತದೆ. ಈ ಅವಧಿಯು ಮುಕ್ತಾಯವಾದ ನಂತರ ನವೀಕರಣದೊಂದಿಗೆ ಪುನಃ ಈ ಸೌಲಭ್ಯವನ್ನು ಪಡೆಯಬಹುದು.
10. ನೋಂದಾಯಿತ ಯೋಜನೆಯ ಅವಧಿಯ ಮುಕ್ತಾಯದ ನಂತರ ಗುರುತಿನ ಕಾರ್ಡ್ ಹೊಂದಿರುವ ಮುಖ್ಯ ಅರ್ಜಿದಾರರು/ಕುಟುಂಬ ಸದಸ್ಯರು ಆಯಾ ವರ್ಷಕ್ಕೆ ನಿಗದಿಪಡಿಸಿದ ವಾರ್ಷಿಕ ವಂತಿಗೆಯನ್ನು ಪಾವತಿ ಮಾಡಿ ನವೀಕರಿಸಿದ್ದಲ್ಲಿ ಯೋಜನೆಯ ಸೌಲಭ್ಯವನ್ನು ಮತ್ತೆ ಪಡೆಯಲು ಅರ್ಹರಾಗುತ್ತಾರೆ.

**ಶಸ್ತ್ರಚಿಕಿತ್ಸಾ ಸೌಲಭ್ಯಗಳು: ***

11. ಯಶಸ್ವಿನಿ ಯೋಜನೆಯಲ್ಲಿ ಹೃದಯ, ಉದರ, ಕಿವಿ, ಮೂಗು, ನರ, ಗಂಟಲು, ಮೂತ್ರಪಿಂಡ ಮತ್ತು ಮೂಳೆ ಇತ್ಯಾದಿ ಸುಮಾರು 805 ಗುರುತಿಸಿದ ಶಸ್ತ್ರಚಿಕಿತ್ಸೆಗಳು ಕೆಲವೊಂದು ಷರತ್ತುಗಳಿಗೆ ಒಳಪಟ್ಟು ರಾಜ್ಯಾದ್ಯಂತ ಟ್ರಸ್ಟಿನಿಂದ ಅಂಗೀಕರಿಸಲ್ಪಟ್ಟ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ನಿಗದಿತ ಮಿತಿಯೊಳಗೆ ನಗದು ರಹಿತವಾಗಿ ಲಭ್ಯವಿರುತ್ತದೆ.
12. ಮೇಲೆ ನಮೂದಿಸಿದ ಸೌಲಭ್ಯಗಳನ್ನು ಹೊರತುಪಡಿಸಿ ಶಸ್ತ್ರಚಿಕಿತ್ಸೆ ಅವಶ್ಯವಿಲ್ಲದ ಇನ್ನಿತರೆ ಯಾವುದೇ ವೈದ್ಯಕೀಯ ಚಿಕಿತ್ಸೆ ಯೋಜನೆಯಲ್ಲಿ ಲಭ್ಯವಿರುವುದಿಲ್ಲ. ಇದಲ್ಲದೇ ಚಿಕಿತ್ಸೆಗಳಾದ ಕೀಮೋಥೆರಪಿ, ರೇಡಿಯೋಥೆರಪಿ, ಜಾಯಿಂಟ್ ಬದಲಾವಣೆ, ಸುಟ್ಟ

ಗಾಯಗಳು, ರಸ್ತೆ ಅಪಘಾತಗಳು, ಹಲ್ಲಿನ ಶಸ್ತ್ರ ಚಿಕಿತ್ಸೆ, ಚರ್ಮದ ಗ್ರಾಫ್ಟಿಂಗ್, ಸ್ಟಂಟ್ಸ್, ಇಂಪ್ಲಾಂಟ್ಸ್ ಇತ್ಯಾದಿ ಸೌಲಭ್ಯಗಳು ಯೋಜನೆಯಲ್ಲಿ ಸೇರಿರುವುದಿಲ್ಲ.

13. ಯೋಜನೆಯಲ್ಲಿ ಒಳಪಡದ ಚಿಕಿತ್ಸೆಗಳು ಮತ್ತು ಟ್ರಸ್ಟ್ ಅಂಗೀಕರಿಸದ ಆಸ್ಪತ್ರೆಗಳಲ್ಲಿ ಪಡೆದಂತಹ ಚಿಕಿತ್ಸೆಗಳ ವೆಚ್ಚ ಭರಿಸಲು ಯಶಸ್ವಿನಿ ಟ್ರಸ್ಟ್ ಜವಾಬ್ದಾರಿಯಾಗಿರುವುದಿಲ್ಲ.
14. ಇತರೆ ಸೌಲಭ್ಯಗಳು: ಫಲಾನುಭವಿಗಳು ಟ್ರಸ್ಟ್ ಅಂಗೀಕರಿಸಿದ ಆಸ್ಪತ್ರೆಗಳಲ್ಲಿ ಉಚಿತ ಹೊರರೋಗಿ ತಪಾಸಣೆ ಹಾಗೂ ಹೊರರೋಗಿ ವೈದ್ಯಕೀಯ ತಪಾಸಣೆಗಳನ್ನು ಶೇಕಡ 25ರಷ್ಟು ರಿಯಾಯಿತಿ ದರದಲ್ಲಿ ಪಡೆಯಬಹುದು. ಇಂತಹ ವೈದ್ಯಕೀಯ ತಪಾಸಣೆಗಳ ವೆಚ್ಚವನ್ನು ಫಲಾನುಭವಿಗಳು ನೇರವಾಗಿ ಆಸ್ಪತ್ರೆಗೆ ಭರಿಸಬೇಕು.
15. ಶಸ್ತ್ರ ಚಿಕಿತ್ಸೆ ಅವಶ್ಯವಿಲ್ಲದ ಅನಾರೋಗ್ಯಕ್ಕೆ ಫಲಾನುಭವಿಗಳು ಹೊರರೋಗಿ ಅಥವಾ ಒಳರೋಗಿಯಾಗಿ ಪಡೆಯುವ ಔಷಧೋಪಚಾರಗಳ ಮತ್ತು ಔಷಧಿಗಳ ವೆಚ್ಚವನ್ನು ಯಶಸ್ವಿನಿ ಟ್ರಸ್ಟ್ ಭರಿಸುವುದಿಲ್ಲ.
16. ಯೋಜನೆಯ ಸೌಲಭ್ಯಗಳು ಟ್ರಸ್ಟ್ ಅಂಗೀಕರಿಸಿದ ಆಸ್ಪತ್ರೆಗಳಲ್ಲಿ ಮಾತ್ರ ಲಭ್ಯವಿರುತ್ತದೆ. ಯೋಜನೆಯಡಿಯಲ್ಲಿ ಅಂಗೀಕರಿಸಿದ ಆಸ್ಪತ್ರೆಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಸದಸ್ಯರಿಗೆ ಒದಗಿಸಲಾಗಿದೆ. ಇವು ಬದಲಾವಣೆಗೆ ಒಳಪಟ್ಟಿರುವುದರಿಂದ ಆಸ್ಪತ್ರೆಗಳ ಬಗ್ಗೆ ಹೆಚ್ಚಿನ ವಿವರಗಳಿಗೆ ಯಶಸ್ವಿನಿ ವೆಬ್‌ಸೈಟನ್ನು ಕೂಡ ನೋಡತಕ್ಕದ್ದು.
17. ಯಶಸ್ವಿನಿ ಫಲಾನುಭವಿಗಳು ಯೋಜನೆಯ ನಿಯಮಗಳ ಪ್ರಕಾರ ಶಸ್ತ್ರಚಿಕಿತ್ಸೆ ಪಡೆದಲ್ಲಿ ಆಸ್ಪತ್ರೆಗಳಿಗೆ ನಗದು ಪಾವತಿ ಮಾಡಬೇಕಾಗಿರುವುದಿಲ್ಲ. ಶಸ್ತ್ರ ಚಿಕಿತ್ಸಾ ವೆಚ್ಚವು ನಿಗದಿತ ಮಿತಿಯಲ್ಲಿ ಷರತ್ತಿಗೊಳಪಟ್ಟು ನಗದುರಹಿತವಾಗಿರುತ್ತದೆ. ಈ ಚಿಕಿತ್ಸಾ ವೆಚ್ಚದ ಬಿಲ್ಲನ್ನು ಅಂಗೀಕರಿಸಿದ ಆಸ್ಪತ್ರೆಯವರು ಯೋಜನೆಯ ಅನುಷ್ಠಾನ ಸಂಸ್ಥೆಗೆ ಕಳುಹಿಸುವರು. ಅನುಷ್ಠಾನ ಸಂಸ್ಥೆಯವರು ಬಿಲ್ಲನ್ನು ಪರಿಶೀಲನೆ ಮಾಡಿ ಅವು ಯೋಜನೆಯ ನಿಯಮ ಮತ್ತು ಷರತ್ತುಗಳ ಪ್ರಕಾರ ಕ್ರಮಬದ್ಧವಾಗಿದ್ದಲ್ಲಿ, ಅವುಗಳನ್ನು ಪಾವತಿ ಮಾಡಲು ಯಶಸ್ವಿನಿ ಟ್ರಸ್ಟಿಗೆ ಕಳುಹಿಸುವರು. ಯಶಸ್ವಿನಿ ಟ್ರಸ್ಟ್ ಅಂಗೀಕರಿಸಿದ ಆಸ್ಪತ್ರೆಗಳ ಬಿಲ್ಲನ್ನು ಮಂಜೂರು ಮಾಡಿದ ನಂತರ ಬಿಲ್ಲಿನ ಮೊತ್ತವನ್ನು ಅನುಷ್ಠಾನ ಸಂಸ್ಥೆಯ ಖಾತೆಗೆ ವರ್ಗಾಯಿಸಲಾಗುವುದು. ಅನುಷ್ಠಾನ ಸಂಸ್ಥೆಯವರು ಆಸ್ಪತ್ರೆಯವರಿಗೆ ಹಣ ಪಾವತಿ ಮಾಡುವರು.
18. ಯಾವುದೇ ಸಂದರ್ಭದಲ್ಲಿ ಯೋಜನೆಯಡಿಯಲ್ಲಿನ ಚಿಕಿತ್ಸಾ ವೆಚ್ಚವನ್ನು ಫಲಾನುಭವಿಗೆ ನೇರವಾಗಿ ಪಾವತಿಸಲು ಅವಕಾಶವಿರುವುದಿಲ್ಲ.

**<u>ಚಿಕಿತ್ಸಾ ಸೌಲಭ್ಯ ಪಡೆಯುವುದು ಹೇಗೆ?</u>**

19. ಯೋಜನೆಯಲ್ಲಿ ನೋಂದಾಯಿತ ಫಲಾನುಭವಿಗಳಿಗೆ ಯುನಿಕ್ ಐಡಿ ಸಂಖ್ಯೆ ಹೊಂದಿರುವ ಗುರುತಿನ ಕಾರ್ಡುಗಳನ್ನು ನೀಡಲಾಗಿದೆ. ಈ ವಿವರಗಳನ್ನು ಯಶಸ್ವಿನಿ ವೆಬ್‌ಸೈಟಿನಲ್ಲಿ ಕೂಡಾ ಅಳವಡಿಸಲಾಗಿದೆ. ಹೊಸದಾಗಿ ನೋಂದಾಯಿಸಿದ ಫಲಾನುಭವಿಗಳ ಮಾಹಿತಿಯನ್ನು ವೆಬ್‌ಸೈಟಿನಲ್ಲಿ ಅಳವಡಿಸುವವರೆಗೆ ಹೊಸದಾಗಿ ನೋಂದಾಯಿಸಿದ ಫಲಾನುಭವಿಗಳು ಚಿಕಿತ್ಸೆ ಪಡೆಯಲು ಬಯಸಿದಲ್ಲಿ ತಾವು ಗುರುತಿನ ಕಾರ್ಡನ್ನು ಪಡೆದಿರುವ ಸಹಕಾರ ಸಂಘದಿಂದ ಟ್ರಸ್ಟ್ ನಿಗದಿಪಡಿಸಿದ ನಮೂನೆಯಲ್ಲಿ ಸ್ವ-ಘೋಷಣೆ ದೃಢೀಕರಣವನ್ನು ಪಡೆದು ಆಸ್ಪತ್ರೆಗೆ ಹಾಜರುಪಡಿಸಬೇಕು. ಸ್ವ-ಘೋಷಣೆ ನಮೂನೆಯು ವೆಬ್‌ಸೈಟ್ ಹಾಗೂ ಸಹಕಾರ ಸಂಘಗಳಲ್ಲಿ ಲಭ್ಯವಿರುತ್ತದೆ. ಯಾವುದೇ ಕಾರಣಕ್ಕಾಗಿ ನೋಂದಾಯಿತ ಸದಸ್ಯರ ಮಾಹಿತಿ ವೆಬ್‌ಸೈಟ್‌ನಲ್ಲಿ ಇಲ್ಲದಿದ್ದರೆ ಅಂತಹವರಿಗೂ ಸಹ ಸ್ವಘೋಷಣೆ ಅರ್ಜಿಯನ್ನು ಹಾಜರು ಪಡಿಸಿ ಚಿಕಿತ್ಸೆ ಪಡೆಯಬಹುದು.
20. ಯೋಜನೆಯಡಿ ಚಿಕಿತ್ಸೆ ಪಡೆಯಲು ಫಲಾನುಭವಿಗಳು ಸದಸ್ಯರ ಉಪಯೋಗಕ್ಕಾಗಿ ನೀಡಲಾದ ಮೂಲ ಗುರುತಿನ ಕಾರ್ಡ್ ಮತ್ತು ಮೂಲ ಹಣ ಪಾವತಿ ರಸೀದಿಯನ್ನು ಅಂಗೀಕರಿಸಿದ ಆಸ್ಪತ್ರೆಗಳಲ್ಲಿ ತಪ್ಪದೆ ಹಾಜರುಪಡಿಸತಕ್ಕದ್ದು.
21. ಆಸ್ಪತ್ರೆಯ ವೈದ್ಯಾಧಿಕಾರಿಗಳು ಅಂತಹ ಫಲಾನುಭವಿಗಳ ಆರೋಗ್ಯ ತಪಾಸಣೆ ಮಾಡಿ ಶಸ್ತ್ರ ಚಿಕಿತ್ಸೆ ಅವಶ್ಯವೆಂದು ಕಂಡುಬಂದಲ್ಲಿ ಮತ್ತು ಸದರಿ ಶಸ್ತ್ರ ಚಿಕಿತ್ಸೆಯು ಯೋಜನೆಯಲ್ಲಿ ಒಳಗೊಂಡಿದ್ದಲ್ಲಿ, ಪೂರ್ಣ ದಾಖಲಾತಿಗಳು ಹಾಗೂ ಚಿಕಿತ್ಸಾ ವಿವರಗಳೊಂದಿಗೆ ಇಂಟರ್‌ನೆಟ್ ಮುಖಾಂತರ ಅನುಷ್ಠಾನ ಏಜೆನ್ಸಿಗೆ ಶಸ್ತ್ರ ಚಿಕಿತ್ಸೆಗೆ ಪೂರ್ವಾನುಮತಿ ಕೋರಿ ಪ್ರಸ್ತಾವನೆ ಕಳುಹಿಸುವರು.
22. ಅನುಷ್ಠಾನ ಏಜೆನ್ಸಿಯು ಚಿಕಿತ್ಸಾ ಪೂರ್ವಾನುಮತಿ ಕೋರಿಕೆಯನ್ನು ಪರಿಶೀಲಿಸಿ ಯೋಜನೆಯ ನಿಯಮಗಳನ್ವಯ ಅರ್ಹತೆ ಇದ್ದಲ್ಲಿ ಶಸ್ತ್ರ ಚಿಕಿತ್ಸಾ ಪೂರ್ವಾನುಮತಿ ನೀಡುವರು. ಆ ನಂತರ ಆಸ್ಪತ್ರೆಯವರು ಶಸ್ತ್ರಚಿಕಿತ್ಸೆಯನ್ನು ನಿರ್ವಹಿಸುವರು.
23. ಒಂದು ವೇಳೆ ಗುರುತಿನ ಕಾರ್ಡಿನ ಮಾಹಿತಿಯು ಗಣಕೀಕೃತ ಮಾಹಿತಿಯೊಂದಿಗೆ ಸರಿಯಾಗಿಲ್ಲದಿದ್ದರೆ, ತಪ್ಪು ಮಾಹಿತಿ ನೀಡಿದ್ದಲ್ಲಿ, ಪೂರ್ಣ ದಾಖಲಾತಿ ನೀಡದಿದ್ದಲ್ಲಿ, ಅಂತಹ ಫಲಾನುಭವಿಗಳ ಚಿಕಿತ್ಸಾ ಕೋರಿಕೆಯನ್ನು ತಿರಸ್ಕರಿಸಲಾಗುವುದು ಮತ್ತು ಯೋಜನೆಯ ಸೌಲಭ್ಯವನ್ನು ನೀಡಲಾಗುವುದಿಲ್ಲ.
24. ಯೋಜನೆಯ ಸೌಲಭ್ಯ ಪಡೆಯಲು ಅನುಷ್ಠಾನ ಏಜೆನ್ಸಿಯಿಂದ ಚಿಕಿತ್ಸಾ ಪೂರ್ವಾನುಮತಿ ಪಡೆಯುವುದು ಕಡ್ಡಾಯ ಹಾಗೂ ಟ್ರಸ್ಟ್ ಅಂಗೀಕರಿಸಿದ ಆಸ್ಪತ್ರೆಗಳಲ್ಲಿ ಮಾತ್ರ ಯೋಜನೆಯ ಸೌಲಭ್ಯ ಪಡೆಯತಕ್ಕದ್ದು.
25. ಟ್ರಸ್ಟ್ ಅಂಗೀಕರಿಸದ ಆಸ್ಪತ್ರೆಗಳಲ್ಲಿ ಫಲಾನುಭವಿಯು ಪಡೆಯುವ ಚಿಕಿತ್ಸೆಗಳ ವೆಚ್ಚವನ್ನು ಟ್ರಸ್ಟ್ ಭರಿಸಲು ಜವಾಬ್ದಾರಿಯಾಗುವುದಿಲ್ಲ.
26. ನೋಂದಾವಣಿ ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಮಾಹಿತಿಯನ್ನು ಪೂರ್ಣವಾಗಿ ನೀಡತಕ್ಕದ್ದು, ಒಂದು ವೇಳೆ ಅಪೂರ್ಣವಾದಲ್ಲಿ, ಅಂಥವರಿಗೆ ಶಸ್ತ್ರಚಿಕಿತ್ಸೆಯನ್ನು ನೀಡಲು ವಿಳಂಬವಾಗುತ್ತದೆ. ತಪ್ಪದೆ ಎಲ್ಲಾ ಮಾಹಿತಿಯನ್ನು ಪೂರ್ಣವಾಗಿ ಭರ್ತಿಮಾಡಬೇಕು. ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ.

27. ಗುರುತಿನ ಕಾರ್ಡನ್ನು ಬೇರೆಯವರಿಗೆ ವರ್ಗಾಯಿಸತಕ್ಕದ್ದಲ್ಲ. ಯಾವುದೇ ಫಲಾನುಭವಿ ತಪ್ಪು ಮಾಹಿತಿ ಕೊಟ್ಟು ಯಶಸ್ವಿನಿ ನಿಯಮಗಳಿಗೆ ವಿರುದ್ಧವಾಗಿ ಕಾರ್ಡನ್ನು ಪಡೆದುಕೊಂಡಿದ್ದಲ್ಲಿ ಅಥವಾ ದುರ್ಬಳಕೆ ಮಾಡಿಕೊಂಡಲ್ಲಿ ಅಂತಹ ಕಾರ್ಡನ್ನು ರದ್ದು ಪಡಿಸಲಾಗುವುದು ಮತ್ತು ಅಂಥವರನ್ನು ಶಿಕ್ಷೆಗೆ ಗುರಿಪಡಿಸಲಾಗುವುದು.
28. ನೆಟ್‌ವರ್ಕ್ ಆಸ್ಪತ್ರೆಗಳ ಪಟ್ಟಿ, ಶಸ್ತ್ರ ಚಿಕಿತ್ಸಾಯಾದಿಗಳನ್ನು ಹೊಸದಾಗಿ ನೋಂದಾಯಿಸಿ ಕೊಳ್ಳುವಾಗ/ನವೀಕರಿಸುವಾಗ ಸಹಕಾರ ಸಂಘಗಳಿಂದ ಪಡೆಯುವುದು ಕಡ್ಡಾಯ.

**ಹೆಚ್ಚಿನ ವಿವರಗಳು:**

- ಗುರುತಿನ ಕಾರ್ಡು ಕಳೆದು ಹೋದಲ್ಲಿ ಅಥವಾ ಇನ್ನಿತರ ಯಾವುದೇ ಸಮಸ್ಯೆಗಳಿದ್ದಲ್ಲಿ, ಅನುಷ್ಠಾನ ಏಜೆನ್ಸಿಗೆ ಹಾಗೂ ಟ್ರಸ್ಟಿಗೆ ತಕ್ಷಣ ವರದಿ ಮಾಡತಕ್ಕದ್ದು.
    - **ಅನುಷ್ಠಾನ ಏಜೆನ್ಸಿಯ ವಿಳಾಸ:** ಮೆಡಿ ಅಸಿಸ್ಟ್ ಇಂಡಿಯಾ ಟಿಪಿಎ ಪ್ರೈ.ಲಿ.,
    ನಂ.41, 16ನೇ ಮುಖ್ಯ ರಸ್ತೆ, 2ನೇ ಅಡ್ಡ ರಸ್ತೆ, 2ನೇ ಹಂತ, ಮೊದಲನೇ ಫೇಸ್, ಬಿಟಿಎಂ ಬಡಾವಣೆ,
    ಬೆಂಗಳೂರು – 560 076. ಸಹಾಯವಾಣಿ: 080–26783111, 080-26784111, ಫ್ಯಾಕ್ಸ್: 080-26782622,
    ಇ-ಮೇಲ್: **yeshasvini@mediassistindia.com**,
    ವೆಬ್‌ಸೈಟ್: **http://healthsprint.com/yeshasvini/ - http://healthhiway.com**
- ತುರ್ತು ಸಹಾಯಕ್ಕಾಗಿ ಅನುಷ್ಠಾನ ಸಂಸ್ಥೆಯ ಜಿಲ್ಲಾ ಸಮನ್ವಯಾಧಿಕಾರಿಗಳನ್ನು ಅಥವಾ ಸಹಾಯವಾಣಿಯನ್ನು ಸಂಪರ್ಕಿಸಬೇಕು.
- ಜಿಲ್ಲಾ ಸಮನ್ವಯಾಧಿಕಾರಿಗಳ ದೂರವಾಣಿ ಸಂಖ್ಯೆಗಳು:
  **1.ಬಾಗಲಕೋಟೆ** – 9342391372, **2.ಬೆಂಗಳೂರು ಗ್ರಾಮಾಂತರ** – 9342391291, **3.ಬೆಂಗಳೂರು ಕೇಂದ್ರ/ ಉತ್ತರ/ ದಕ್ಷಿಣ** -9342391291, **4.ಬೆಳಗಾಂ** – 9342391294, **5.ಬಳ್ಳಾರಿ** – 9342391379, **6.ಬೀದರ್** – 9342391295, **7.ಬಿಜಾಪುರ** – 9342391370, **8.ಚಾಮರಾಜನಗರ** – 9342391292, **9.ಚಿಕ್ಕಬಳ್ಳಾಪುರ** – 7483216107, **10.ಚಿಕ್ಕಮಗಳೂರು** – 9342391369, **11.ಚಿತ್ರದುರ್ಗ** – 9342391367, **12.ಕೊಡಗು** – 9342391384, **13.ದಾವಣಗೆರೆ** – 9342391380, **14.ಧಾರವಾಡ** – 9342391378, **15.ಗದಗ** – 9342391365, **16.ಗುಲ್ಬರ್ಗಾ** – 9342391385, **17. ಹಾಸನ** – 9342391361, **18.ಹಾವೇರಿ** – 9342391388, **19.ಕೋಲಾರ** – 9342391387, **20.ಕೊಪ್ಪಳ** – 9342391364, **21. ಮಂಡ್ಯ** – 9342391363, **22. ದಕ್ಷಿಣ ಕನ್ನಡ** – 9342391360, **23.ಮೈಸೂರು** – 9379508540, **24.ರಾಯಚೂರು** – 9342391390, **25.ರಾಮನಗರ** – 9342391366, **26.ಶಿವಮೊಗ್ಗ** – 9342391381, **27.ತುಮಕೂರು** – 9342391368, **28. ಉಡುಪಿ** - 9342391362, **29.ಉತ್ತರ ಕನ್ನಡ** – 9342391383, **30.ಯಾದಗಿರಿ** – 9342391382.

- ಇನ್ನೂ ನಿಮ್ಮಲ್ಲಿ ಯಾವುದೇ ಸಂದೇಹಗಳಿದ್ದರೆ, ನಿಮ್ಮ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿಯನ್ನು ಸಂಪರ್ಕಿಸಿ. ದೂರವಾಣಿ ಸಂಖ್ಯೆಯು ವೆಬ್‌ಸೈಟಿನಲ್ಲಿ ಲಭ್ಯವಿದೆ.

**ಸೂಚನೆ:** ಫಲಾನುಭವಿಯು ಹೊಸ ನೋಂದಾವಣಿ ಅಥವಾ ನವೀಕರಣ ಮಾಡಿದಾಗ ಪ್ರಧಾನ ಅರ್ಜಿದಾರರಿಗೆ ನೀಡಲಾದ/ನೀಡಲಾಗಿದ್ದ ಯುನಿಕ್ ಐಡಿ ಸಂಖ್ಯೆಯನ್ನು ಸಹಕಾರ ಸಂಘದ ಕಾರ್ಯದರ್ಶಿ/ಮ್ಯಾನೇಜರ್‌ರವರು ಮೇಲೆ ನಮೂದಿಸಿದ ಭಾಗದಲ್ಲಿ ಬರೆದು ಸಂಘದ ಮುದ್ರೆ ಮತ್ತು ಕಿರುಸಹಿಯೊಂದಿಗೆ ನೀಡುತಕ್ಕದ್ದು.

* ಷರತ್ತುಗಳು ಅನ್ವಯವಾಗುವುವು.

**ಟ್ರಸ್ಟ್ ವಿಳಾಸ:** ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟ್, ಸಹಕಾರ ಇಲಾಖೆ, ಕೊಠಡಿ
ಸಂಖ್ಯೆ: 607, 3ನೇ ಗೇಟ್, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ॥ ಬಿ.ಆರ್.ಅಂಬೇಡ್ಕರ್ ರಸ್ತೆ,
ಬೆಂಗಳೂರು–560 001,
ಯಶಸ್ವಿನಿ ಟ್ರಸ್ಟ್‌ನ ದೂರವಾಣಿ ಸಂಖ್ಯೆ: 080–2203 2046,
ಇ-ಮೇಲ್: **yeshtrust@gmail.com**,
ವೆಬ್‌ಸೈಟ್: **www.yeshasvini.kar.nic.in**